

# ಗುಡಿಸಲುಗಳ ಧ್ವಂಸ ಹಾಗೂ ಸ್ಥಳಾಂತರವನ್ನು ಎದುರಿಸುವುದು ಹೇಗೆ?

## ಕೊಳಗೇರಿ ನಿವಾಸಿಗಳಿಗೆ ಮಾಹಿತಿ ಕೈಪಿಡಿ

Housing and Land Rights Network

ಸ್ಲಂ ಜಗತ್ತು

# HOW TO RESPOND TO FORCED EVICTIONS ?
## A HAND BOOK KANNADA

**ಗುಡಿಸಲುಗಳ ಧ್ವಂಸ ಹಾಗೂ ಸ್ಥಳಾಂತರವನ್ನು ಎದುರಿಸುವುದು ಹೇಗೆ?**
**ಕೊಳಗೇರಿ ನಿವಾಸಿಗಳಿಗೆ (ಮಾಹಿತಿ ಕೈಪಿಡಿ)**

ಕನ್ನಡಕ್ಕೆ ಹಾಗೂ ಚಿತ್ರಗಳು :
ಅರುಳ್‌ದಾಸ್ ವಿಜಯ. ಜನಬಿಂಬ,ಬೆಂಗಳೂರು

ವಿನ್ಯಾಸ :
ವಡಿವೇಲು.ಪಿ (ಬೆಂಗಳೂರು)

ಪ್ರತಿಗಳು 1000

ಪ್ರಕಟಣೆ ಪ್ರತಿಗಳಿಗಾಗಿ:


ಸ್ಲಂಜಗತ್ತು,

771, 23ನೇ ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ,

ಎಲ್ ಆರ್ ನಗರ ಬೆಂಗಳೂರು-560047

ಹಾಗೂ

ಹೌಸಿಂಗ್ ಅಂಡ್ ಲ್ಯಾಂಡ್ ರೈಟ್ಸ್ ನೆಟ್‌ವರ್ಕ್,
ಜಿ-18/1, ನಿಜಾಮುದ್ದಿನ್ ವೆಸ್ಟ್,
ನವದೆಹಲಿ - 110013



# ಮುನ್ನುಡಿ

ಜಗತ್ತಿನಾದ್ಯಂತ ಶ್ರೀಮಂತರ ಅಭಿವೃದ್ಧಿ ಯೋಜನೆಗಳಿಗಾಗಿ ಬಡವರನ್ನು ಅವರ ವಾಸದ ಭೂಮಿಯಿಂದ ಬಲವಂತವಾಗಿ ಒಕ್ಕಲೆಬ್ಬಿಸಿ ತೆರವುಗೊಳಿಸಲಾಗುತ್ತಿದೆ. ನಗರದ ಸುಂದರೀಕರಣಕ್ಕಾಗಿ, ಬಹುರಾಷ್ಟ್ರೀಯ ಕಂಪೆನಿಗಳ ಕಟ್ಟಡಗಳ ನಿರ್ಮಾಣಕ್ಕಾಗಿ, ಭೂ ಮಾಫಿಯಾ-ಭೂ ದರೋಡೆಕೋರರ ಲಾಭಕೋರತನ ಹಾಗೂ ಅಭಿವೃದ್ಧಿಗಾಗಿ, ಮೂಲಭೂತ ಸೌಲಭ್ಯಗಳ ಖಾಸಗೀಕರಣದ ಮೂಲಕ ಲಾಭ ಮಾಡಿಕೊಳ್ಳಲು ಬಡವರನ್ನು ನಗರಗಳಿಂದ ಬಲವಂತವಾಗಿ ತೆರವುಗೊಳಿಸಲಾಗುತ್ತಿದೆ.

ನೈಸರ್ಗಿಕ ಸಂಪನ್ಮೂಲಗಳನ್ನು ದೋಚಲು ಮತ್ತು ರೆಸಾರ್ಟ್‌ಗಳ ನಿರ್ಮಾಣಕ್ಕಾಗಿ ಅರಣ್ಯ ಮತ್ತು ಪರಿಸರ ರಕ್ಷಣೆಯ ಹೆಸರಿನಲ್ಲಿ ಕಾಡನ್ನೇ ಅವಲಂಬಿಸಿ ಬದುಕುವ ಮೂಲನಿವಾಸಿ ಸಮುದಾಯಗಳನ್ನು ಬಲವಂತದಿಂದ ಕಾಡಿನಿಂದ ಹೊರಹಾಕಲಾಗುತ್ತಿದೆ.

ಹೀಗೆ ವಂಚನೆಗೊಳಗಾಗಿ ಹೊರದೂಡಲ್ಪಟ್ಟ ಬಡಜನರು ತಮ್ಮ ಭೂಮಿ, ಗುಡಿಸಲು, ಪರಂಪರೆಗತವಾದ ಉದ್ಯೋಗ-ಉಪಕರಣಗಳು, ಭೂಮಿ ಅವಲಂಬಿತ ಕಸುಬುಗಳು ಹಾಗೂ ಕೌಶಲ್ಯಗಳು ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗುತ್ತಾರೆ. ತಾವು ವಾಸಿಸುತ್ತಿದ್ದ ಮನೆಗಳು ಹಾಗೂ ಸುತ್ತಲಿನ ಸಂಪನ್ಮೂಲಗಳನ್ನೇ ನಂಬಿ ಬದುಕುತ್ತಿದ್ದ ಜನರು, ಎಲ್ಲವನ್ನೂ ಬಿಟ್ಟು ಇದ್ದಕ್ಕಿದ್ದಂತೆ ಒಕ್ಕಲೆಬ್ಬಿಸಲ್ಪಟ್ಟಾಗ ನಿರುದ್ಯೋಗಕ್ಕೆ ತುತ್ತಾಗಿ, ಇದ್ದಿದ್ದೆಲ್ಲವನ್ನೂ ಕಳೆದುಕೊಂಡು ಕಡುಬಡತನಕ್ಕೆ ದೂಡಲ್ಪಡುತ್ತಾರೆ.


ಇಂತಹ ವ್ಯವಸ್ಥೆಯ ವಿರುದ್ಧ ಪ್ರಶ್ನೆ ಮಾಡುವುದಾಗಲೀ, ಯಾವ ಕಾನೂನಿನ ಮೂಲಕ ಇದು ನಡೆಯುತ್ತಿದೆ ಮತ್ತು ಇಂತಹ ಸಂಧರ್ಭದಲ್ಲಿ ಏನು ಮಾಡಬೇಕು, ಎಂಬುದೂ ತೋಚದೆ ಅವರ ಹಕ್ಕುಗಳ ಬಗ್ಗೆ ತಿಳುವಳಿಕೆ ಇಲ್ಲದೆ ವಲಸೆ ಹೋಗುವುದಕ್ಕೂ ಸಾಧ್ಯವಾಗದೆ, ಅಲ್ಲೇ ರಸ್ತೆ ಬದಿಗಳಲ್ಲಿ ಬಿಡಾರಹೂಡಿ ಬದುಕುವ ದಯನೀಯಸ್ಥಿತಿ ಉಂಟಾಗಿದೆ.

ಅಂತಹ ಸಂಧರ್ಭಗಳಲ್ಲಿ ಈ ಪುಸ್ತಕದಲ್ಲಿ ನೀಡಲಾಗಿರುವ ಬಲವಂತದ ಒಕ್ಕಲೆಬ್ಬಿಸುವಿಕೆ ಹಾಗೂ ತೆರವುಗೊಳಿಸುವಿಕೆಯ ಕುರಿತಾದ ಮಾನವ ಹಕ್ಕುಗಳ ಒಡಂಬಡಿಕೆಯ ಅಂಶಗಳು, ಕಾನೂನಿನ ಅಡಿಯಲ್ಲಿ ರಕ್ಷಣಾ ಮಾಹಿತಿ, ಕೈಗೊಳ್ಳಬೇಕಾದ ತುರ್ತು ಚಟುವಟಿಕೆಗಳನ್ನು ತಿಳಿದುಕೊಂಡು ಅವುಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ಸಮುದಾಯ ಕಾರ್ಯಕರ್ತರು, ನಗರದ ನಿರ್ಲಕ್ಷಿಸಲ್ಪಟ್ಟವರು, ವಸತಿ ಹಾಗು ಭೂಮಿಹಕ್ಕಿನ ಸಂಘಟನೆಗಳು ಇದರ ಉಪಯೋಗ ಪಡೆದುಕೊಳ್ಳಬಹುದು.

ದನ್ಯವಾದಗಳೊಂದಿಗೆ

ಐಸಕ್ ಅರುಳ್ ಸೆಲ್ವ
ಸ್ಲಂಜಗತ್ತು.
ಬೆಂಗಳೂರು

ಶಿವಾನಿ ಚೌದ್ರಿ
ಹೌಸಿಂಗ್ ಅಂಡ್ ಲ್ಯಾಂಡ್ ರೈಟ್ ನೆಟ್‌ವರ್ಕ್.
ನವದೆಹಲಿ



## ವಸತಿ ಹಕ್ಕು ಎಂದರೇನು?

**ಜಗತ್ತು ಅಭಿವೃದ್ಧಿಯ ಹಾದಿಯಲ್ಲಿ ಬಹಳ ವೇಗವಾಗಿ ಚಲಿಸುತ್ತಿದ್ದರೂ, ಅದರ ಜನಸಂಖ್ಯೆಯಲ್ಲಿ ಸರಿಸುಮಾರು ಅರ್ಧದಷ್ಟು ಜನ ವಾಸಯೋಗ್ಯ ಗುಣಮಟ್ಟದ ಅಗತ್ಯದಷ್ಟು ಸೌಲಭ್ಯದೊಂದಿಗೆ ಕೂಡಿದ ಮನೆಗಳಿಂದ ವಂಚಿಸಲ್ಪಟ್ಟಿದ್ದಾರೆ.**

ವಿಶ್ವಮಾನವ ಹಕ್ಕುಗಳ ಒಡಂಬಡಿಕೆಗಳು ಹಾಗೂ ಕಾನೂನಿನ ಅನ್ವಯ:

- ವಾಸಮಾಡಲು ಅಗತ್ಯದಷ್ಟು ಹಾಗೂ ಗುಣಮಟ್ಟದ ಮನೆಯನ್ನು ಹೊಂದುವುದು ಪ್ರತಿಯೊಬ್ಬರ ಮಾನವ ಹಕ್ಕು.
- ಮನೆಯೆಂಬುದು ಸುತ್ತಲೂ ಗೋಡೆಗಳು ಮತ್ತು ಛಾವಣಿಗಳಿಂದಲೂ ಮಾತ್ರ ನಿರ್ಮಾಣವಾಗಿರದೆ, ಪ್ರತಿಯೊಬ್ಬರೂ ತಮ್ಮ ಕುಟುಂಬದೊಂದಿಗೆ ಭದ್ರತೆಯೊಂದಿಗೆ ಜೀವನ ನಡೆಸಲು ಬೇಕಾದ ಗುಣಮಟ್ಟದ ಹಾಗೂ ಅಗತ್ಯ ಸೌಲಭ್ಯದೊಂದಿಗೆ ಸಾಮಾಜಿಕ ಹಾಗೂ ಸಮುದಾಯ ಅಗತ್ಯದ ರಚನೆಗಳೊಂದಿಗೆ ಕೂಡಿದ ಸುಭದ್ರವಾದ ಮನೆಯಾಗಿರಬೇಕು.

ವಿಶ್ವ ಮಾನವ ಹಕ್ಕುಗಳ ಪ್ರಕಟಣೆ–1948 (ಯೂನಿವರ್ಸಲ್ ಡಿಕ್ಲೇರೇಷನ್ ಆಫ್ ಹ್ಯೂಮನ್‌ರೈಟ್ಸ್) ಭಾಗ 25 ರ ಉಲ್ಲೇಖದಂತೆ:


“ಪ್ರತಿಯೊಬ್ಬರೂ ಆಹಾರ, ಮನೆ, ಉಡುಪು, ಆರೋಗ್ಯ ಸೇವೆ, ಸಮುದಾಯ ಭದ್ರತೆ ಮುಂತಾದ ಮೂಲಭೂತ ಅಗತ್ಯತೆಗಳನ್ನು ಪೋರೈಸಿಕೊಳ್ಳಬಹುದಾದ ಹಕ್ಕುಗಳುಳ್ಳವರು. ನಿರುದ್ಯೋಗ ಖಾಯಿಲೆ, ನಿರ್ಲಕ್ಷ್ಯ ನೆಲೆಯ ವೃದ್ಧಾಪ್ಯ ಹಾಗೂ ಜೀವನೋಪಾಯ ಕಳೆದುಕೊಂಡವರಿಗೆ ಅಗತ್ಯವಾದ ಸಾಮಾಜಿಕ ಭದ್ರತೆ ಪಡೆಯುವ ಹಕ್ಕಿದೆ”. ಎಂದು ತಿಳಿಸುತ್ತದೆ


ವಿಶ್ವಮಾನವ ಹಕ್ಕುಗಳು ಪ್ರಕಟಣೆ 1966 ರ ಪ್ರಕಾರ “ಆರ್ಥಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ಒಡಂಬಡಿಕೆ ವಸತಿ ಹಕ್ಕನ್ನು ಮಾನವ ಹಕ್ಕೆಂದು ಪ್ರತಿಪಾದಿಸುತ್ತದೆ.

ಈ ಒಡಂಬಡಿಕೆಯ 11 ನೇ ಪರಿಚ್ಛೇಧದಂತೆ “ಪ್ರತಿಯೊಬ್ಬರೂ ತಮ್ಮ ಕುಟುಂಬದೊಂದಿಗೆ ಗುಣಮಟ್ಟದ ಜೀವನ ನಡೆಸಲು ಅಗತ್ಯದಷ್ಟು ಆಹಾರ, ಉಡುಪು ಮತ್ತು ಮನೆಯನ್ನು ಹೊಂದಬಹುದಾಗಿದೆ. ಸಮುದಾಯದ ಇತರರೊಂದಿಗೆ ಸೇರಿ ಸಾಮಾಜಿಕ ಪರಿಸರವನ್ನು ಬೆಳೆಸಿಕೊಳ್ಳುವಂಥ ಹಕ್ಕಿದೆ ಎಂದು ಒಪ್ಪಿಕೊಳ್ಳುತ್ತದೆ. ಈ ಒಪ್ಪಂದದಲ್ಲಿ ಭಾರತವೂ ಒಂದು ಸದಸ್ಯ ದೇಶವಾಗಿದ್ದು ಈ ಒಡಂಬಡಿಕೆಗೆ ಸಹಿ ಹಾಕಿದೆ.

ವಿಶ್ವ ಸಂಸ್ಥೆಯ ಭೂಮಿ ಹಕ್ಕಿನ ವಿಶೇಷ ಮೇಲ್ವಿಚಾರಕ ಅಧಿಕಾರಿಯವರು (UN Special Raporteur for Adequate Housing) ವಸತಿ ಹಕ್ಕಿನ ಕುರಿತು ವಿವರಣೆ ಹೀಗಿದೆ.

“ಪ್ರತಿಯೊಬ್ಬ ಮಹಿಳೆ, ಪುರುಷ, ಯುವಜನ, ಮಕ್ಕಳು ನಿರ್ಭೀತಿಯಿಂದ, ಭದ್ರತೆಯೊಂದಿಗೆ ತಮ್ಮ ಸಮುದಾಯದೊಂದಿಗೆ ಬೆರೆತು ಶಾಂತಿ, ಸ್ವಾಭಿಮಾನದೊಂದಿಗೆ ಬದುಕುವ ತಾಣವೇ ಮನೆ. ಇದೇ ಗುಣಮಟ್ಟದ ಹಾಗೂ ಅಗತ್ಯದಷ್ಟು ವಸತಿ ಹಕ್ಕು”.





# ಬಲವಂತದ ತೆರವು ಎಂದರೇನು?

ವಿಶ್ವ ಸಂಸ್ಥೆಯ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ಕಾರ್ಯಕಾರಿ ಸಮಿತಿಯ [Committee on Economic Social and Cultural Right) ವಿವರಣೆ ಹೀಗಿದೆ:

ಬಲವಂತವಾಗಿ ವಸತಿ ತೆರವುಗೊಳಿಸುವುದು ಎಂದರೆ: ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ವ್ಯಕ್ತಿ, ಕುಟುಂಬ, ಅಥವಾ ಒಂದು ಸಮುದಾಯವನ್ನು ಅವರ ಒಪ್ಪಿಗೆಯಿಲ್ಲದೆ ಬಲವಂತವಾಗಿ ಅವರ ಭೂಮಿ ಅಥವಾ ಮನೆಗಳಿಂದ ಯಾವುದೇ ಕಾನೂನು ರೀತಿಯ ಭದ್ರತೆಗಳನ್ನು ನೀಡದೆ ಹೊರಹಾಕುವುದು."

ಅಭಿವೃದ್ಧಿ ಯೋಜನೆಗಳ ನೆಪದಲ್ಲಿ ನಡೆಸುವ ಬಲವಂತವಾದ ಒಕ್ಕಲೆಬ್ಬಿಸುವಿಕೆ ಹಾಗೂ ಸ್ಥಳಾಂತರದಕುರಿತು ವಿಶ್ವಸಂಸ್ಥೆಯ (UN Basic Principles and guidelines on Development Based Evictions and Displacement-2007) ವಿವರಣೆ:

"ಒಬ್ಬ ವ್ಯಕ್ತಿಯನ್ನೋ ಗುಂಪನ್ನೋ ಸಮುದಾಯವನ್ನೋ ಅವರ ಒಪ್ಪಿಗೆಯಿಲ್ಲದೆ ಬಲವಂತಪಡಿಸಿ, ಯಾವುದೇ ರೀತಿಯ ಕಾನೂನು ಹಾಗೂ ಸಾಮಾಜಿಕ ಭದ್ರತೆಯನ್ನು ನೀಡದೆ, ಅವರ ಬದುಕಿಗೆ ಆಧಾರವಾಗಿರುವ ಮನೆ, ಹಾಗೂ ಭೂಮಿ ಸಾರ್ವಜನಿಕ ಸಂಪತ್ತುಗಳಿಂದ ಅವರನ್ನು ಬೇರ್ಪಡಿಸಿ, ಅವರ ದೈನಂದಿನ ಜೀವನವನ್ನು ಒಡೆದುರಿಳಿಸುವ ಕಾರ್ಯವೇ ಬಲವಂತದಿಂದ ಒಕ್ಕಲೆಬ್ಬಿಸುವುದು ಹಾಗೂ ಸ್ಥಳಾಂತರಿಸುವುದು", ಎನ್ನುತ್ತದೆ.


**ಮನೆ ಧ್ವಂಸ ಹಾಗು ಒಕ್ಕಲೆಬ್ಬಿಸುವುದು ಮಾನವಹಕ್ಕುಗಳ ಉಲ್ಲಂಘನೆಯೇ?**

ಹೌದು ಬಲವಂತದ ಒಕ್ಕಲೆಬ್ಬಿಸುವಿಕೆಯಿಂದಾಗಿ ಅಗತ್ಯ ಆಹಾರ, ನೀರು, ಆರೋಗ್ಯ ಸೇವೆ, ಶಿಕ್ಷಣ, ಉದ್ಯೋಗ, ವ್ಯಕ್ತಿಯ ಭದ್ರತೆ, ಶೋಷಣೆ ಹಿಂಸೆಗಳ ವಿರುದ್ಧ ಸಾತಂತ್ರ್ಯ, ಭೂಮಿ ಹಾಗೂ ವಸತಿ ಹಕ್ಕುಗಳಿಂದ ವಂಚಿಸಲಾಗುತ್ತದೆ. ಇದರಿಂದ ಅತ್ಯಂತ ಸಂಕಷ್ಟಕ್ಕೆ ಒಳಗಾಗುವವರು ಎಂದರೆ, ಮಕ್ಕಳು, ಮಹಿಳೆಯರು, ವಿಕಲಚೇತನರು, ವೃದ್ದರು, ಒಬ್ಬಂಟಿ ಮಹಿಳೆಯರು, ಕಡು ಬಡವರು, ಅಲ್ಪಸಂಖ್ಯಾತರು ಹಾಗೂ ವಂಚಿತ ಸಮುದಾಯಗಳು ಸೇರಿರುವುದರಿಂದ ಇದು ಮಾನವ ಹಕ್ಕು ಉಲ್ಲಂಘನೆ ಆಣುತ್ತದೆ.

ನೆನಪಿನಲ್ಲಿಡಬೇಕಾದದ್ದು:

- ಬಲವಂತದ ಮನೆ ತರವು ಹಾಗು ಸ್ಥಳಾಂತರ ಅಂತರರಾಷ್ಟ್ರೀಯ ಮಾನವ ಹಕ್ಕುಗಳನ್ನು ಉಲ್ಲಂಘಿಸುವಂಥದ್ದು.
- ಬಲವಂತದ ಮನೆ ತರವು ಹಾಗು ಸ್ಥಳಾಂತರ ವಸತಿ ಹಕ್ಕನ್ನು ಉಲ್ಲಂಘಿಸುವಂಥದ್ದು.
- ಅಂತರರಾಷ್ಟ್ರೀಯ ಕಾನೂನುಗಳ ಪ್ರಕಾರ ಬಲವಂತದ ಒಕ್ಕಲೆಬ್ಬಿಸುವಿಕೆಯಿಂದ ರಕ್ಷಿಸುವುದು ಸರ್ಕಾರಗಳ ಕರ್ತವ್ಯವಾಗಿದೆ. ಅಭಿವೃದ್ಧಿ ಯೋಜನೆಗಳ ಕಾರಣಗಳಿಂದ ನಡೆಸಲಾಗುವ ಬಲವಂತದ ಒಕ್ಕಲೆಬ್ಬಿಸುವಿಕೆ ಹಾಗೂ ಮನೆ ತೆರವು ಕುರಿತ ವಿಶ್ವಸಂಸ್ಥೆಯ 2007ರ ಘೋಷಣೆಯಂತೆ:
- ಅಗತ್ಯದಷ್ಟು ವಸತಿ, ಹಾಗೂ ಭೂಮಿಯ ಮೂಲಭೂತ ಹಕ್ಕುಗಳನ್ನು ವರ್ಗ, ಲಿಂಗ, ಭಾಷೆ, ಜಾತಿ, ಧರ್ಮ, ಹುಟ್ಟು ಇನ್ನಿತರೆ ಕಾರಣಕ್ಕೆ ತಾರತಮ್ಯವಿಲ್ಲದೆ, ಎಲ್ಲ ಜನರಿಗೂ ನೀಡುವುದು ಪ್ರತಿಯೊಂದು ಸರ್ಕಾರದ ಜವಾಬ್ದಾರಿಯಾಗಿದೆ.
- ಬಲವಂತದ ಒಕ್ಕಲೆಬ್ಬಿಸುವಿಕೆ ತಪ್ಪಿಸಲಾಗದ ಸಂಧರ್ಭಗಳಲ್ಲಿ ಅಂದರೆ ಬೇರೆ ದಾರಿಯೇ ಇಲ್ಲ ಎಂಬ ಸಂಧರ್ಭದಲ್ಲಿ ಮಾತ್ರವೇ ನಡೆಸಲಾಗುತ್ತಿದೆ ಎಂಬುದಕ್ಕೆ ಸರಿಯಾದ ಕಾರಣಗಳನ್ನು ಸರ್ಕಾರಗಳು ಜನರಿಗೆ ನೀಡಬೇಕಾಗುತ್ತದೆ.





## ಬಲವಂತದ ಒಕ್ಕಲೆಬ್ಬಿಸುವಿಕೆಯನ್ನು ವಿರೋಧಿಸುವ ಅಂತರರಾಷ್ಟ್ರೀಯ ಕಾನೂನುಗಳು.


ವಾಸ ಯೋಗ್ಯ ವಸತಿ ಹೊಂದುವ ಕುರಿತ ಹಕ್ಕುಗಳನ್ನು ಒತ್ತಾಯಿಸುವ ಅಂತರರಾಷ್ಟ್ರೀಯ (ಭಾರತ ಸರ್ಕಾರ ಸಹಿ ಮಾಡಿರುವ) ಕಾನೂನುಗಳು.


- ಆರ್ಥಿಕ ,ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ಅಂತರರಾಷ್ಟ್ರೀಯ ಒಡಂಬಡಿಕೆ (ಪರಿಚ್ಛೇಧ11.1)
- ಮಕ್ಕಳ ಹಕ್ಕುಗಳ ಒಡಂಬಡಿಕೆ (ಪರಿಚ್ಛೇಧ 27.3)
- ಮಹಿಳೆಯರ ಮೇಲಿನ ಎಲ್ಲಾ ರೀತಿಯ ವಿಭಜನೆ ಹಾಗು ಶೋಷಣೆಗಳ ವಿರುದ್ದ ಒಡಂಬಡಿಕೆ(ಪರಿಚ್ಛೇಧ 14.2)

- ಜನಾಂಗಿಯ ಆದಾರಿತ ಶೋಷಣೆ ವಿರುದ್ದ ಒಡಂಬಡಿಕೆ(ಪರಿಚ್ಛೇಧ 5) ಇದು ಮಾತ್ರವಲ್ಲದೆ ವಿಶ್ವಸಂಸ್ಥೆಯ ಆರ್ಥಿಕ, ಸಾಮಾಜಿಕ, ಹಾಗೂ ಸಾಂಸ್ಕೃತಿಕ ಹಕ್ಕುಗಳ ಸಮಿತಿಯು ವಸತಿ ಹಕ್ಕಿನ ಅಡಿಯಲ್ಲಿ ನೀಡಲಾಗಿರುವ ಹೇಳಿಕೆಗಳನ್ನು ಸದಸ್ಯ ರಾಷ್ಟ್ರಗಳು ಪಾಲಿಸಬೇಕಾಗಿದೆ.

- ಕಾನೂನು ರೀತಿಯ ಭೂಮಿಯ ಭದ್ರತೆ
- ಮೂಲಭೂತ ಸೌಲಭ್ಯಗಳು ಸುಲಭವಾಗಿ ದೊರಕುವಂತೆ ನೋಡಿಕೊಳ್ಳುವುದು
- ಸಾಮಾನ್ಯ ಜನರೂ ಕೊಂಡುಕೊಳ್ಳಬಹುದಾದ ಬೆಂಬಲ ಬೆಲೆಯಲ್ಲಿ ವಸತಿಯನ್ನು ಖಾತ್ರಿಗೊಳಿಸುವುದು.
- ವಯೋವೃದ್ದರು, ವಿಕಲ ಚೇತನರಂತಹ ಎಲ್ಲರ ಅಗತ್ಯಗಳಿಗೆ ಪೂರಕವಾಗಿ ವಸತಿ ಇರತಕ್ಕದ್ದು.
- ವಾಸ ಮಾಡಲು ಯೋಗ್ಯವಾದ ರೀತಿಯಲ್ಲಿ ವಸತಿ ವ್ಯವಸ್ತೆ ಕಲ್ಪಿಸುವುದು.
- ಜೀವನೋಪಾಯಕ್ಕೆ ಸಂಪನ್ಮೂಲಗಳು ಹಾಗೂ ಉದ್ಯೋಗ ಸ್ಥಳಕ್ಕೆ ಹತ್ತಿರವಾಗಿ ಮನೆಗಳು ಇರತಕ್ಕದ್ದು.
- ಜೀವನ ಶೈಲಿ ಹಾಗೂ ಸಾಂಸ್ಕೃತಿಕ ಆಚರಣೆಗಳಿಗೆ ಪೂರಕವಾದ ಮನೆಗಳಾಗಿರಬೇಕು.

**ವಿಶ್ವ ಸಂಸ್ಥೆಯ ವಿಶೇಷ ಪರಿವೀಕ್ಷಣಾ ಅಧಿಕಾರಿಗಳು ವಸತಿ ಹಕ್ಕಿನ ಕುರಿತು ನೀಡಿರುವ ಉಲ್ಲೇಖಗಳು:** ಭದ್ರತೆ ಯೊಂದಿಗೆ ಕೂಡಿದ ಭೂಮಿ/ಮನೆಗಳ ಕುರಿತು ಮಾಹಿತಿ ಹೊಂದುವುದು ಹಾಗೂ ಸಂಬಂಧಿಸಿದ ವಿಚಾರಗಳಲ್ಲಿ ಭಾಗವಹಿಸುವುದು. ಭೂಮಿ, ನೀರು ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಅನುಭವಿಸುವ ಹಕ್ಕು) ತೆರವುಗೊಳ್ಳುವಿಕೆ, ವಸ್ತುಗಳ ನಾಶ, ಹಾಗೂ ಎಲ್ಲಾ ರೀತಿಯ ನಾಶಗಳಿಂದ ರಕ್ಷಣೆ ಹಾಗೂ ಸ್ವಾತಂತ್ರ್ಯ. ಒಂದು ವೇಳೆ ತೆರವುಗೊಳಿಸಲ್ಪಟ್ಟಿದ್ದರೆ ಪುನರ್ವಸತಿ ಹಾಗೂ ಪರಿಹಾರ ಹೊಂದುವುದು. ನ್ಯಾಯಯುತ ನ್ಯಾಯದಾನಕ್ಕಾದ ಅವಕಾಶ. ತೆರವಿನ ಕಾರಣದಿಂದ ಶಿಕ್ಷಣದಿಂದ ವಂಚಿತರಾದರೆ, ಅದಕ್ಕೆ ಪರಿಹಾರ. ತೆರವಿನ ಕಾರಣಕ್ಕಾಗಿ ಮಹಿಳೆಯರ ಮೇಲಿನ ಎಲ್ಲಾ ರೀತಿಯ ಶೋಷಣೆಗಳಿಂದ ರಕ್ಷಣೆ.




ಭಾರತದ
ಸಂವಿಧಾನ

# ಬಲವಂತವಾಗಿ ಒಕ್ಕಲೆಬ್ಬಿಸುವುದನ್ನು ವಿರೋಧಿಸುವ ರಾಷ್ಟ್ರೀಯ ಕಾನೂನುಗಳು

**1.ಭಾರತದ ಸಂವಿಧಾನ:**

ಭಾರತದ ಸಂವಿದಾನ ಪರಿಚ್ಛೇದ 21 ಬದುಕುವ ಹಕ್ಕಿನ ಕುರಿತು ತಿಳಿಸುತ್ತದೆ. ಇದರ ಅಡಿಯಲ್ಲಿ ಉಚ್ಚ ನ್ಯಾಯಾಲಯವು ಭೂಮಿ/ಮನೆ ಹೊಂದುವ ಹಕ್ಕನ್ನು ಮೂಲಭೂತ ಹಕ್ಕೆಂದು ತಿಳಿಸುತ್ತದೆ.

ಭಾರತದ ಸಂವಿಧಾನವನ್ನು ಅಧ್ಯಯನ ಮಾಡಿದಾಗ ಭೂಮಿ/ಮನೆ ಹೊಂದುವ ಹಕ್ಕನ್ನು ಒಳಗೊಂಡಿರುವುದು ಅರಿವಾಗುತ್ತದೆ.

- ಭಾರತದ್ಯಾದಂತ ಎಲ್ಲಿ ಬೇಕಾದರೂ ಓಡಾಡುವ ಹಕ್ಕು(ವಿಭಾಗ 19.1 ಡಿ)
- ಭಾರತದಲ್ಲಿ ಎಲ್ಲಿಬೇಕಾದರೂ ಮನೆ ಕಟ್ಟಿಕೊಳ್ಳುವ ಸ್ವಾತಂತ್ರ್ಯ(ವಿಭಾಗ 19 1 ಇ)
- ಬಯಸುವ ವೃತ್ತಿಯನ್ನು ಮಾಡುವ ಹಕ್ಕು (ಭಾಗ 19 1 ಜಿ)
- ಕಾನೂನಿನ ಮುಂದೆ ಎಲ್ಲರೂ ಸಮಾನರು (ಭಾಗ 14)
- ಜಾತಿ, ವರ್ಗ, ಲಿಂಗ, ಧರ್ಮ ಮುಂತಾದ ಯಾವ ಕಾರಣಕ್ಕೂ ತಾರತಮ್ಯಕ್ಕೊಳಗಾದೆ ಬದುಕುವುದು (ಭಾಗ 15.1)
- ಜೀವಿಸುವ ಹಾಗೂ ವ್ಯಕ್ತಿ ಸ್ವಾತಂತ್ರ್ಯದ ಹಕ್ಕು(ಭಾಗ 21)
- ಮಹಿಳೆ, ಮಕ್ಕಳಿಗಾಗಿ ವಿಶೇಷ ಆಧ್ಯತೆ(ಭಾಗ 15.3)

**2.ಭಾರತದ ಕಾನೂನುಗಳು**


ದಲಿತರು/ಆದಿವಾಸಿಗಳ ಎಸ್‌ಸಿ ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ 1989 ಅಧ್ಯಾಯ 2(3) (15)ರ ಅಡಿಯಲ್ಲಿರುವ ಭದ್ರತೆಯ ಉಲ್ಲೇಖ: ಎಸ್‌ಸಿ /ಎಸ್‌ಟಿ ಗುಂಪಿಗೆ ಸೇರಿದವರನ್ನು ತಾವು ವಾಸಿಸುವ ಸ್ಥಳದಿಂದಲೋ, ಆಶ್ರಯಪಡೆದಿರುವ ಜಾಗದಲ್ಲಿಂದಲೋ, ಗ್ರಾಮಗಳಿಂದಲೋ ಬಲವಂತದಿಂದ ತೆರವುಗೊಳಿಸುವುದು ಕಾನೂನು ಬಾಹಿರವಾಗುತ್ತದೆ.

**3.ಭಾರತದ ನೀತಿಗಳು:**

ರಾಷ್ಟ್ರೀಯ ನಗರ ಆಶ್ರಯ ಹಾಗೂ ವಸತಿ ಕುರಿತ ನೀತಿ ನ್ಯಾಷನಲ್ ಅರ್ಬನ್ ಹೌಸಿಂಗ್ ಅಂಡ್ ಹಾಬಿಟೇಟ್ ಪಾಲಿಸಿ (National Urban Housing and Habitat Policy) 2007 ರ ಪ್ರಕಾರ:

- ಸರ್ಕಾರವು ಎಲ್ಲಾ ಪ್ರಜೆಗಳಿಗೂ ಅಗತ್ಯವಾದ ಹಾಗೂ ಗುಣಮಟ್ಟದ ವಸತಿಯನ್ನು ನೀಡಬೇಕು. ಇದರಲ್ಲಿ ದಲಿತ ಹಾಗೂ ಆದಿವಾಸಿಗಳು, ಹಿಂದುಳಿದವರು, ಹಾಗೂ ನಗರ ನಿರಾಶ್ರಿತರು ಮೊದಲಾದವರಿಗೆ ಆಧ್ಯತೆ ನೀಡಬೇಕು.
- ಎಲ್ಲರಿಗೂ ನ್ಯಾಯಯುತ ಹಾಗೂ ಸಮಾನವಾದ ಭೂಮಿ, ಮನೆ ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.
- ಉದ್ಯೋಗಕ್ಕೆ ಸಮೀಪವೇ ವಾಸದ ಮನೆಗಳನ್ನು ನಿರ್ಮಿಸಬೇಕು.
- ಎಲ್ಲಾ ರೀತಿಯ ಯೋಜನೆ ಹಾಗು ತೀರ್ಮಾನಗಳಲ್ಲೂ ಮಹಿಳೆಯರ ಭಾಗವಹಿಸುವಿಕೆ ಇರಲೇಬೇಕು.

ರಾಷ್ಟ್ರೀಯ ಪುನರ್ ನಿರ್ಮಾಣ ಹಾಗೂ ಪುನರ್ವಸತಿ ನೀತಿ ( ನ್ಯಾಷನಲ್ ರೀ ಸೆಟ್ಟಲ್ಮೆಂಟ್ ಅಂಡ್ ರಿಹಾಬ್ಲಿಟೇಷನ್ ಪಾಲಿಸಿ)2007



- ಬೇರೆ ಕಡೆ ಸ್ಥಳಾಂತರಿಸುವುದನ್ನು ತಪ್ಪಿಸಿ, ಸಾಧ್ಯವಾದಷ್ಟು ಅದೇ ಜಾಗದಲ್ಲೇ ಮನೆಗಳನ್ನು ನಿರ್ಮಿಸಬೇಕು.
- ತೀರ್ಮಾನಗಳಲ್ಲಿ ಸ್ಥಳೀಯ ಜನರು ಭಾಗವಹಿಸಬೇಕು ಹಾಗೂ ಹೊರಗಿನವರ ಭಾಗವಹಿಸುವಿಕೆಯನ್ನು ತಪ್ಪಿಸಿ, ಸ್ಥಳೀಯರ ಪ್ರತಿಕ್ರಿಯೆಗಳ ಆದಾರದಲ್ಲಿ ಕಾರ್ಯಯೋಜನೆ ರೂಪಿಸಬೇಕು.
- ಯೋಜನೆಯ ಕುರಿತು ಸಾಮಾಜಿಕ ಪರಿಣಾಮ ವರದಿ ಮಾಡಿ (ಸೋಷಿಯಲ್ ಇಂಪಾಕ್ಟ್ ಅಸೆಸ್‌ಮೆಂಟ್) ಜನರಿಗೆ ತಿಳಿಸಬೇಕು.
- ಯಾವುದೇ ಸರ್ವೆ ನಡೆಯುವುದಕ್ಕೆ ಮೊದಲು ತೆರವುಗೊಳಿಸುವ ಮನೆಗಳಿಗೆ ಪರ್ಯಾಯ ಮನೆಗಳು ಎಲ್ಲಿ ನಿರ್ಮಿಸಲಾಗುವುದು ಎಂಬುದನ್ನು ಸ್ಪಷ್ಟವಾದ ವಿವರಗಳೊಂದಿಗೆ ಜನರಿಗೆ ಮಾಹಿತಿ ನೀಡಬೇಕಾಗುತ್ತದೆ.
- ಯೋಜನೆಯ ಕುರಿತ ಮಾಹಿತಿಗಳನ್ನು ಕನಿಷ್ಟ ಪಕ್ಷ ನಾಲ್ಕು ದಿನಪತ್ರಿಕೆಗಳಲ್ಲಿ ಅದರಲ್ಲೂ ಸ್ಥಳಿಯ ಭಾಷೆಗಳಲ್ಲಿ ಬಿಡುಗಡೆ ಮಾಡಬೇಕು. ಮಂಡಲ, ಮಹಾನಗರ ಪಾಲಿಕೆ ಕಛೇರಿ, ಡಿಸಿ ಕಛೇರಿ, ಹಾಗೂ ಬಾಧಿತವಾಗುವ ಪ್ರದೇಶಗಳಲ್ಲೂ ಸ್ಪಷ್ಟವಾಗಿ ತಿಳಿಸಿರಬೇಕು.
- ಸಂತ್ರಸ್ಥರಿಗೆ, ಅವರ ವಾಸದ ಸ್ಥಳದ ಕುರಿತು ಹಾಗೂ ಮುಂದೆ ವಾಸಮಾಡಲಿರುವ ಸ್ಥಳದ ಕುರಿತು, ಸಾರ್ವಜನಿಕ ಸಭೆಯ ಮೂಲಕ ಚರ್ಚಿಸುವ ಮೂಲಕ ಯೋಜನೆಗಳ ಕುರಿತ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.

**4. ಉಚ್ಚ ನ್ಯಾಯಾಲಯದ ತೀರ್ಪುಗಳು**

ಉಚ್ಚ ನ್ಯಾಯಾಲಯದ ಹಲವಾರು ತೀರ್ಪುಗಳು ವಸತಿ ಹೊಂದುವ ಹಕ್ಕನ್ನು ಧೃಡೀಕರಿಸುತ್ತವೆ.
ಅವುಗಳಲ್ಲಿ ಕೆಲವು:

- ಫ್ರಾನ್ಸಿಸ್ ಕೆರೋಲಿಯು ದಿಲ್ಲಿ ಸರ್ಕಾರದ ವಿರುದ್ದ ಹೂಡಿದ ದಾವೆಯ ತೀರ್ಪು(1981): ( ಫ್ರಾನ್ಸಿಸ್ ಕಾರೋಲಿ ವರ್ಸಸ್ ಯೂನಿಯನ್ ಟೆರಿಟರಿ ಆಫ್ ಡೆಲ್ಲಿ ಕೇಸ್ ನಂ ಎಐಆರ್ ಎಸ್‌ಸಿ 746,753) "ಬದುಕ್ಕುವ ಹಕ್ಕು, ಸ್ವಾಭಿಮಾನ ಹಾಗೂ ಆತ್ಮಗೌರವದಿಂದ ಬದುಕುವ ಹಕ್ಕನ್ನು ಒಳಗೊಂಡಿದೆ. ಜೀವಿಸಲು ಅಗತ್ಯವಾದ ಮೂಲಭೂತ ಸೌಕರ್ಯಗಳಾದ ಆಹಾರ, ಉಡುಪು, ತಲೆಗೊಂದು ಸೂರು(ಮನೆ), ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಹಲವು ತಂತ್ರಗಳನ್ನು ಬಳಸುವುದು. ಇತರ ಜನರೊಂದಿಗೆ ಸೇರಿ ಜೀವನ ನಡೆಸುವುದು ಬದುಕುವ ಹಕ್ಕಿನ ಭಾಗವೇ ಆತದೆ,"
- ಚಮೇಲಿಸಿಂಗ್ ಉತ್ತರ ಪ್ರದೇಶ ರಾಜ್ಯದ ವಿರುದ್ದ ದಾವೆಯ ತೀರ್ಪು; ( ಚಮೇಲಿಸಿಂಗ್ ಸಿಂಗ್ ಅಂಡ್ ಅದರ್ಸ್ ವರ್ಸಸ್ ಸ್ಟೇಟ್ ಆಫ್ ಉತ್ತರ ಪ್ರದೇಶ್, ಕೇಸ್ ನಂಬರ್ ಎಐಆರ್ 2 ಎಸ್‌ಸಿಸಿ 549 132) 1996: ಎಲ್ಲ ನಾಗರೀಕ ಸಮುದಾಯದಲ್ಲೂ ಆಹಾರ, ನೀರು, ಪರಿಸರ, ಶಿಕ್ಷಣ, ಆರೋಗ್ಯ ಸೇವೆ, ಹಾಗೂ ವಸತಿ ಹಕ್ಕು ಬದುಕುವ ಹಕ್ಕಿನಲ್ಲಿ ಮುಖ್ಯವಾದ ಪಾತ್ರವಹಿಸುತ್ತದೆ.
- ಓಲ್ಗಾ ಟೆಲ್ಲೀಸ್ ಮುಂಬಯ್ ಮಹಾನಗರಪಾಲಿಕೆಯ ವಿರುದ್ದ ಹೂಡಿದ ದಾವೆಯ ತೀರ್ಪಿನ ಪ್ರಕಾರ (ಓಲ್ಗಾ ಟೆಲ್ಲೀಸ್ ವರ್ಸಸ್ ಬಾಂಬೆ ಮುನಿಸಿಪಲ್ ಕಾರ್ಪೋರೇಷನ್ 1985)

ಭಾರತ ಸಂವಿಧಾನ ಪರಿಚ್ಛೇಧ 21 ರ ಪ್ರಕಾರ ಬದುಕುವ ಹಕ್ಕು ಜೀವನೋಪಾಯದ ಹಕ್ಕನ್ನು ಒಳಗೊಂಡಿದೆ. ಯಾಕೆಂದರೆ. ಜೀವನೋಪಾಯವಿಲ್ಲದೆ ಮನುಷ್ಯ ಬದುಕಲು ಸಾಧ್ಯವಿಲ್ಲ.


ಕರ್ನಾಟಕ ಕೊಳಚೆ ಪ್ರದೇಶಗಳ
(ಮೇಲ್ಪಾಟು ಮತ್ತು ನಿರ್ಮೂಲನೆ)
ಅಧಿನಿಯಮ(1973)

## ಬಲವಂತದ ಒಕ್ಕಲೆಬ್ಬಿಸುವಿಕೆಯನ್ನು ವಿರೋಧಿಸುವ ಹಾಗೂ ವಸತಿ ಹಕ್ಕನ್ನು ಎತ್ತಿ ಹಿಡಿಯುವ ರಾಜ್ಯ ಕಾಯ್ದೆಗಳು

### ಕರ್ನಾಟಕ ಕೊಳಚೆ ಪ್ರದೇಶಗಳ(ಮೇಲ್ಪಾಟು ಮತ್ತು ನಿರ್ಮೂಲನೆ)ಅಧಿನಿಯಮ(1973)ಮತ್ತು ನಿಯಮ 1975ರ (ಸ್ಲಂ ಕಾಯ್ದೆ) ಅಡಿಯಲ್ಲಿನ ಹಕ್ಕುಗಳು.

ಇದರಲ್ಲಿನ ಹಕ್ಕುಗಳು ನಿಮಗೆ ಸಿಗಬೇಕಾದರೆ, ನೀವು ವಾಸಿಸುವ ಪ್ರದೇಶ ಕೊಳಚೆ ಪ್ರದೇಶವೆಂದು ಘೋಷಣೆಯಾಗಿರಬೇಕು. ಘೋಷಣೆ ಮಾಡುವ ಅಧಿಕಾರವು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಮೊದಲಿಗೆ ನಿಮ್ಮ ಪ್ರದೇಶ ಸ್ಲಂ ಕಾಯ್ದೆ ಅಡಿಯಲ್ಲಿ ಘೋಷಣೆಯಾಗಿದೆಯೆ ಎಂದು ತಿಳಿದುಕೊಳ್ಳಿ ಹಾಗೆ ಘೋಷಣೆಯಾಗಿದ್ದರೆ, ಜಿಲ್ಲಾಧಿಕಾರಿಗಳು ಹಾಗು ಕೊಳಗೇರಿ ಅಭಿವೃದ್ಧಿ ಮಂಡಳಿಯ ಗಮನಕ್ಕೆ ತಾರದೆ ಯಾವುದೆ ಇಲಾಖೆ ಅಥವಾ ಖಾಸಗಿ ವ್ಯಕ್ತಿಗಳು ತಮ್ಮ ಮನೆ ಅಥವಾ ಗುಡಿಸಲುಗಳನ್ನು ತೆರವು ಗೊಳಿಸುವಂತಿಲ್ಲ. ಘೋಷಣೆಯಾಗದಿದ್ದಲ್ಲಿ ಕೂಡಲೆ ನಿಮ್ಮ ವಿಭಾಗೀಯ ಅಥವಾ ರಾಜ್ಯದ ಕೊಳಗೇರಿ ಅಭಿವೃದ್ಧಿ ಮಂಡಳಿಗೆ, ಜಿಲ್ಲಾಧಿಕಾರಿಗಳಿಗೆ ನಿಮ್ಮ ಪ್ರದೇಶವನ್ನು ಸ್ಲಂ ಕಾಯ್ದೆಯ ಕಲಂ 3ರ ಅಡಿಯಲ್ಲಿ ಘೋಷಣೆ ಮಾಡಲು ಮನವಿ ಪತ್ರ ಕೊಡುವುದು. ಹೀಗೆ ಮಾಡಿದ್ದಲ್ಲಿ ಜಿಲ್ಲಾಧಿಕಾರಿಗಳು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಕೂಡಲೆ ನಿಮ್ಮ ಪ್ರದೇಶಕ್ಕೆ ಎತ್ತಂಗಡಿಯಿಂದ ರಕ್ಷಣೆಯು ಜಿಲ್ಲಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

ಸ್ಲಂ ಘೋಷಣೆಯ ನಂತರ ಭೂಮಿ ಹಕ್ಕು, ಮನೆ ಹಕ್ಕು, ಮೂಲಭೂತ ನಾಗರಿಕ ಸೌಲಭ್ಯಗಳನ್ನು ಕಲ್ಪಿಸುವುದು. ಸರ್ಕಾರದ ಜವಾಬ್ದಾರಿ. ಸ್ಲಂಗಳ ಎತ್ತಂಗಡಿ, ತೆರವು ಮತ್ತು ಸ್ಥಳಾಂತರದಂತಹ ಸಂದರ್ಭದಲ್ಲಿ ಪುನರ್ ವಸತಿ ಪಡೆಯುವ ಹಕ್ಕು ನಿಮ್ಮದಾಗಿದೆ.

### ಕರ್ನಾಟಕ ಭೂ ಕಂದಾಯ ಕಾಯ್ದೆ 1964


ಕಲಂ 91: ಬಳಕೆಯಾಗದ ಭೂಮಿಯನ್ನು ತಾಶಿಲ್ದಾರ್ ಹಾಗು ಜಿಲ್ಲಾಧಿಕಾರಿಗಳು ವಸತಿ ಉದ್ದೇಶಕ್ಕೆ ನೀಡಬಹುದು, ಇದರ ಅಡಿಯಲ್ಲಿ ವಸತಿ ವಂಚಿತ ಬಡವರು ಭೂಮಿಯನ್ನು ಪಡೆಯಬಹುದಾಗಿದೆ.

ಕಲಂ 94ಬಿ: ಇದರ ಅಡಿಯಲ್ಲಿ ನೀವು ಸರ್ಕಾರಿ ಭೂಮಿಯಲ್ಲಿ 14 ಏಪ್ರಿಲ್ 1990 ರ ಮೊದಲು ಮನೆ ಅಥವ ಗುಡಿಸಲು ನಿರ್ಮಿಸಿದ್ದಲ್ಲಿ ಆ ಭೂಮಿಯ ಒಡೆತನವನ್ನು ನಿಮಗೆ ವರ್ಗಾಯಿಸಬೇಕಾಗುತ್ತದೆ. (ಜಿಲ್ಲಾಧಿಕಾರಿಗಳ ಜವಾಬ್ದಾರಿ).

ಕಲಂ 94ಸಿ: 14 ಏಪ್ರಿಲ್ 1998 ಕ್ಕೆ ಹಿಂದೆ ಯಾರಾದರು ಅನಧಿಕೃತವಾಗಿ ಸರ್ಕಾರಿ ಭೂಮಿಯಲ್ಲಿ ಮನೆ ನಿರ್ಮಾಣ ಮಾಡಿಕೊಂಡಿದ್ದಲ್ಲಿ, ಅವರ ಮನವಿಯ ಆದಾರದಲ್ಲಿ ಆ ಭೂಮಿಯ ಒಡೆತನವನ್ನು ನಿವಾಸಿಯ ಹೆಸರಿಗೆ ವರ್ಗಾಹಿಸತಕ್ಕದ್ದು.

### ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1964

18ಎ: ಸರ್ಕಾರಿ ಭೂಮಿಯನ್ನು ಜಿಲ್ಲಾಧಿಕಾರಿಗಳು ಮನೆಯಿಲ್ಲದವರಿಗೆ ನಿವೇಶನವಾಗಿ ಹಂಚಿಕೆ ಮಾಡಬಹುದಾಗಿದೆ.





## ಬಲವಂತವಾಗಿ ಒಕ್ಕಲೆಬ್ಬಿಸುವ ಸಂಧರ್ಭದಲ್ಲಿ ಸರ್ಕಾರಗಳು ಅನುಸರಿಸಬೇಕಾದ ಮಾರ್ಗಸೂಚನೆ ಹಾಗೂ ಮಾನದಂಡಗಳು :

ಅಭಿವೃದ್ಧಿ ಯೋಜನೆಗಳ ಕಾರಣಕ್ಕಾಗಿ ನಡೆಸಲಾಗುವ ಬಲವಂತದ ಒಕ್ಕಲೆಬ್ಬಿಸುವಿಕೆ ಹಾಗೂ ಸ್ಥಳಾಂತರ ಕುರಿತ ವಿಶ್ವಸಂಸ್ಥೆಯ ನಿಲುವುಗಳು ಹಾಗೂ ಆ ವಿವರಣೆಯಲ್ಲಿರುವ ನಿಬಂಧನೆಗಳು:

- ಅಂತರರಾಷ್ಟ್ರೀಯ ಕಾನೂನುಗಳ ಅನ್ವಯ ಬಲವಂತದ ಒಕ್ಕಲೆಬ್ಬಿಸುವಿಕೆಯಿಂದ ಜನರನ್ನು ರಕ್ಷಿಸುವುದು ಸರ್ಕಾರಗಳ ಕರ್ತವ್ಯ. ಸ್ಥಳಾಂತರವನ್ನು ತಪ್ಪಿಸುವ ಹಾಗೂ ಕಡಿಮೆಗೊಳಿಸುವ ನಿಟ್ಟಿನಲ್ಲಿಯೇ ಸರ್ಕಾರಗಳ ಯೋಜನೆಗಳು ರೂಪುಗೊಳ್ಳಬೇಕು.
- ಒಕ್ಕಲೆಬ್ಬಿಸುವಿಕೆಯನ್ನು ತಪ್ಪಿಸಲು ಪರ್ಯಾಯ ಯೋಜನೆಗಳನ್ನು ರೂಪಿಸಲು ಸರ್ಕಾರಗಳು ಮುಂದಾಗಿರಬೇಕು.
- ಬಲವಂತದ ಒಕ್ಕಲೆಬ್ಬಿಸುವಿಕೆಯನ್ನು ತಪ್ಪಿಸಲು ಸಾಧ್ಯವಾಗದ ಸಂಧರ್ಭದಲ್ಲಿ ಮಾತ್ರ ಒಕ್ಕಲೆಬ್ಬಿಸಲಾಗುತ್ತದೆ ಎಂಬುದಕ್ಕೆ ತಕ್ಕ ಪುರಾವೆ ಹಾಗೂ ಕಾರಣವನ್ನು ನೀಡಬೇಕು.
- ವಿಶ್ವ ಮಾನವ ಹಕ್ಕುಗಳ ಸಂಸ್ಥೆ ಹಾಗೂ ವಿಶ್ವಸಂಸ್ಥೆಯ ಮಾನದಂಡದ ಆಧಾರದಲ್ಲಿ ನಡೆಯುತ್ತಿದೆ ಎಂಬುದನ್ನು ಖಾತರಿ ಪಡಿಸಬೇಕು.
- ತೆರವುಗೊಳಿಸಲ್ಪಟ್ಟ ಜನರಿಗೆ ಪುನರ್ವಸತಿ ಕಲ್ಪಿಸುವ ಖಾತರಿಯನ್ನು ಸರ್ಕಾರಗಳು ನೀಡಬೇಕು.

**ಸರ್ಕಾರಗಳು ತೆರವುಗೊಳಿಸುವುದಕ್ಕೆ ಮೊದಲು ನಿರ್ವಹಿಸಬೇಕಾದ ಕರ್ತವ್ಯಗಳು:**


- ಸರ್ಕಾರಗಳು ತೆರವು ಗೊಳಿಸುವುದನ್ನು ತಪ್ಪಿಸಲು ಪರ್ಯಾಯ ಯೋಜನೆಯ ಕುರಿತು ಅಧ್ಯಯನ ಮಾಡಿರಬೇಕು.
- ತೆರವಿನಿಂದ ತೊಂದರೆಗೆ ಒಳಗಾಗಲಿರುವ ಜನರಿಗೆ ಈ ಕುರಿತು ಪೂರ್ವಭಾವಿಯಾಗಿ ತಿಳಿಸಬೇಕು.

ಈ ಮಾಹಿತಿಗಳನ್ನು ಸಂಬಂಧಪಟ್ಟ ಅಧಿಕಾರಿಗಳೇ ಜನರಿಗೆ ಅರ್ಥವಾಗುವ ಸಾಮಾನ್ಯ ಭಾಷೆಗಳಲ್ಲಿ ತಿಳಿಯಪಡಿಸಬೇಕು.

- ಜನರಿಗೆ ನೀಡಬೇಕಾದ ಮಾಹಿತಿಗಳು: ತೆರವು ಗೊಳಿಸಲಾಗುತ್ತಿರುವುದರ ಕುರಿತ ಸ್ಪಷ್ಟವಾದ ಕಾರಣ ಹಾಗೂ ಸಂಬಂಧಿಸಿದ ಪುರಾವೆಗಳು. ಪುನರ್ವಸತಿ ಯೋಜನೆಯ ಹಾಗೂ ಅದರಲ್ಲೂ ದುರ್ಬಲ ಜನರ ರಕ್ಷಣೆಯ ಕುರಿತು ಸ್ಪಷ್ಟವಾಗಿ ವಿವರಿಸಬೇಕು.
- ಒಕ್ಕಲೆಬ್ಬಿಸುವಿಕೆ ಹಾಗೂ ಪರ್ಯಾಯ ಯೋಜನೆಯ ಕುರಿತು ಸಾರ್ವಜನಿಕ ವಿಚಾರಣೆ ಸಭೆಗಳನ್ನು ಏರ್ಪಡಿಸಬೇಕು.
- ಸಾರ್ವಜನಿಕರು ಈ ಯೋಜನೆಗಳ ಸಾಧಕ ಬಾಧಕಗಳನ್ನು ಅರ್ಥ ಮಾಡಿಕೊಳ್ಳಲು ಅದರ ಕುರಿತು ಮುಕ್ತವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು, ಪರ್ಯಾಯಗಳನ್ನು ಸೂಚಿಸಲು ಹಾಗು ನಿರಾಕರಿಸುವ ಅವಕಾಶವನ್ನೂ ನೀಡಬೇಕು.
- ತೊಂದರೆಗೊಳಗಾಗಲಿರುವ ಜನರಿಗೆ ಕಾಯ್ದೆಗಳ ಕುರಿತು ಅಗತ್ಯ ಮಾಹಿತಿ ಮತ್ತು ಅವರ ಹಕ್ಕುಗಳ ಕುರಿತು ವಿವರಿಸಬೇಕು.

ತೆರವುಗೊಳಿಸುವ ಸಂದರ್ಭಗಳಲ್ಲಿ ಸರ್ಕಾರದ ಕರ್ತವ್ಯಗಳು:

- ಮಾನವಹಕ್ಕುಗಳನ್ನು ರಕ್ಷಿಸುವ ಹಾಗು ಗೌರವಿಸುವ ನಿಟ್ಟಿನಲ್ಲಿ ಸರ್ಕಾರಿ ಅಧಿಕಾರಿಗಳು ಹಾಗೂ ಸಮನ್ವಯ ಅಧಿಕಾರಿಗಳು ತೆರವುಗೊಳಿಸುವ ಪ್ರಕ್ರಿಯೆಯಲ್ಲಿ ವರ್ತಿಸಬೇಕು.
- ತೆರವುಕಾರ್ಯದಲ್ಲಿ ನಿವಾಸಿಗಳ ಯಾವುದೇ ವಸ್ತು ಹಾಗೂ ಆಸ್ತಿಗಳನ್ನು ಅಧಿಕಾರಿಗಳು ಯಾವುದೇ ರೀತಿಯಲ್ಲಿ ಯಾವುದೇ ಕಾರಣಕ್ಕೂ ಹಾನಿ ಅಥವಾ ನಾಶಮಾಡುವಂತಿಲ್ಲ.
- ಪ್ರತಿಕುಲ ಹವಾಮಾನ, ಉತ್ಸವಗಳು, ಧಾರ್ಮಿಕ ಹಬ್ಬಗಳು, ಚುನಾವಣೆಯ ಹಿಂದಿನ ದಿನಗಳು, ಶಾಲಾ ಪರೀಕ್ಷೆ ಮುಂತಾದ ಸಂದರ್ಭಗಳಲ್ಲಿ ಕಡ್ಡಾಯವಾಗಿ ತೆರವು ಕಾರ್ಯವನ್ನು ಕೈಗೊಳ್ಳುವಂತಿಲ್ಲ.



- ಮಕ್ಕಳು ಹಾಗೂ ಮಹಿಳೆಯರ ರಕ್ಷಣೆಗೆ ಆದ್ಯತೆ ನೀಡಬೇಕು.
- ಸರ್ಕಾರದ ವತಿಯಿಂದ ಯಾವುದೇ ಹಿಂಸಾತ್ಮಕ ರೀತಿಯ ಕಾರ್ಯವನ್ನು ನಡೆಸುವುದಿಲ್ಲವೆಂದು ಖಾತರಿಪಡಿಸಬೇಕು.
- ವಿಶ್ವ ಮಾನವ ಹಕ್ಕುಗಳ ಮಾನದಂಡದಂತೆ, ಮನೆಗಳ ನಿರ್ಮಾಣ, ಕುಡಿಯುವ ನೀರು, ವಿದ್ಯುತ್‌ಶಕ್ತಿ, ನೈರ್ಮಲ್ಯ, ಶಾಲೆ, ರಸ್ತೆ ಮುಂತಾದ ಎಲ್ಲಾ ಸೌಕರ್ಯಗಳಿಂದ ಕೂಡಿದ ಪುನರ್ವಸತಿ ಯೋಜನೆಯನ್ನು ತೆರವು ಕಾರ್ಯದ ಮುಂಚಿತವಾಗಿ ನಿರ್ಮಾಣಮಾಡಿ ತೆರವಿಗೊಳಗಾಗುವವರಿಗೆ ತಿಳಿಸಬೇಕು.
- ತೆರವು /ಸ್ಥಳಾಂತರಗೊಳಿಸಲಾದ ಜನರಿಗೆ ದಮನಿತ ಜನರ ಹೆಸರುಗಳಿಂದ ಕರೆಯಲ್ಪಡುವ ಪ್ರದೇಶಗಳಲ್ಲಿ ಪುನರ್ ವಸತಿ ಕಲ್ಪಿಸುವಂತಿಲ್ಲ.



## ತೆರವುಗೊಳಿಸುವ ಸಂದರ್ಭದಲ್ಲಿ ಸರ್ಕಾರಗಳು, ಸಂತ್ರಸ್ತರಿಗೆ ನೀಡಬೇಕಾದ ರಕ್ಷಣೆ ಹಾಗೂ ಪರಿಹಾರಗಳು:

**ಪರಿಹಾರ :**

ತೆರವುಗೊಳಿಸುವಿಕೆಯಿಂದಾಗಿ ಭಯಭೀತರಾದ ಪ್ರತಿಯೊಬ್ಬ ಸಂತ್ರಸ್ತರು ಸೂಕ್ತ ಪರಿಹಾರವನ್ನು ಹೊಂದುವ ಹಕ್ಕಿದೆ. ಅವರ ಅಹವಾಲುಗಳನ್ನು ಕೇಳಲು, ಕಾನೂನು ರೀತಿಯಾದ ಪರಿಹಾರವನ್ನು ಹೊಂದಲು, ಕಾನೂನು ಸಹಾಯ ಪಡೆಯಲು ರಕ್ಷಣೆ, ಪುನರ್ವಸತಿ, ಪುನರ್‌ಜೀವನ, ನಷ್ಟದ ಪರಿಹಾರ ಹೊಂದುವ ಹಕ್ಕಿದೆ. ಪುನರ್ವಸತಿಯ ಸಂಧರ್ಭಗಳಲ್ಲಿ ಮಹಿಳೆಯರು, ಮಕ್ಕಳು, ದಲಿತ ಹಾಗೂ ಬುಡಕಟ್ಟು ಜನರ ಮಾನವ ಹಕ್ಕುಗಳನ್ನು ಸಮಾನವಾಗಿ ರಕ್ಷಿಸಲು ಸರ್ಕಾರಗಳು ಖಾತರಿ ನೀಡಬೇಕು.ಸಂತ್ರಸ್ತರಿಗೆ ತುರ್ತಾಗಿ ನೀಡಬೇಕಿರುವುದು: ಆಹಾರ, ಶುದ್ದ ಕುಡಿವ ನೀರು, ನೈರ್ಮಲ್ಯ, ಮನೆ, ಸರಿಯಾದ ಉಡುಪುಗಳು, ಆರೋಗ್ಯ ಸೇವೆ, ಜೀವನೋಪಾಯಕ್ಕೆ ಉದ್ಯೋಗ, ಮಕ್ಕಳಿಗೆ ಶಿಕ್ಷಣ. ಜೀವನೋಪಾಯಕ್ಕೆ ಅಗತ್ಯ ಸಾರ್ವಜನಿಕ ಸಂಪತ್ತನ್ನು ಉಪಯೋಗಿಸುವ ಹಕ್ಕು ಮುಂತಾವುಗಳನ್ನು ಶೀಘ್ರವೇ ಖಾತ್ರಿಗೊಳಿಸಬೇಕು.

**ಸಂತ್ರಸ್ಥರ ಪುನರ್ವಸತಿಗೆ ಮಾರ್ಗಸೂಚನೆಗಳು:**

- ಅಧಿಕೃತ ಭೂಮಿಯ ಹಕ್ಕು ಒಳಗೊಂಡ ವಸತಿ(ಹಕ್ಕುಪತ್ರ).
- ಅಗತ್ಯ ಮೂಲಭೂತ ವಸತಿಗಳಿಂದ ಕೂಡಿದ ಮನೆಗಳು: ನೀರು. ಅಡಿಗೆ ಇಂಧನ, ನೈರ್ಮಲ್ಯದ ವಾತಾವರಣ, ಹತ್ತಿರದಲ್ಲಿ ಆರೋಗ್ಯ ಸೇವೆ, ಆಹಾರ ಭದ್ರತೆ, ಕಸ ನಿರ್ವಹಣೆ, ಚರಂಡಿ ನೀರು ನಿರ್ವಹಣೆ, ಹಾಗೂ ತುರ್ತು ಸೇವೆಗಳು.
- ಜೀವಿಸಲು ಪೂರಕವಾದ ಮನೆಗಳು ಅಂದರೆ, ಸಾಕಷ್ಟು ಗಾಳಿ ಬೆಳಕು ಓಡಾಡುವ ಮನೆಗಳು, ಮನೆಯ ಸುತ್ತಲೂ ಸಾಕಷ್ಟು ಸ್ಥಳಾವಕಾಶ, ಛಳಿ, ಗಾಳಿ ಬಿಸಿಲು ಹಾಗೂ ಮಳೆಯಿಂದ ರಕ್ಷಣೆ ನೀಡುವಂಥ ಮನೆಗಳು.
- ಉದ್ಯೋಗವಕಾಶ, ಶಾಲೆಗಳು, ಆರೋಗ್ಯ ಸೇವೆ ಹಾಗೂ ಮಕ್ಕಳ ಕೇಂದ್ರಗಳ ಹತ್ತಿರದಲ್ಲಿ ನಿರ್ಮಿಸಲಾದ ಮನೆಗಳು.
- ಸಾಂಸ್ಕೃತಿಕತೆ ಹಾಗೂ ಸಂಪ್ರದಾಯಗಳ ಆಚರಣೆಗಳಿಗೆ ಪೂರಕವಾದ ಮನೆಗಳು.

**ನಷ್ಟ ಪರಿಹಾರ:**


- ಸ್ಥಳಾಂತರದಿಂದ ಉಂಟಾದ ಎಲ್ಲಾ ಆರ್ಥಿಕ ನಷ್ಟಗಳಿಗೂ ತಕ್ಕುದಾದ ಪರಿಹಾರವನ್ನು ನೀಡಲೇಬೇಕು. ತೆರವು ವೇಳೆಯಲ್ಲಿ ನಡೆದ ದೈಹಿಕ ಹಾಗೂ ಮಾನಸಿಕ ಹಿಂಸೆಯ ನಷ್ಟ, ಸಮುದಾಯ ಉಪಯೋಗದ ನಷ್ಟ, ವಸ್ತುನಷ್ಟ, ವಸ್ತುಗಳ ಶೇಖರಣಾ ಸಾಮರ್ಥದ ನಷ್ಟ, ಚಿಕಿತ್ಸೆಯ ಖರ್ಚು ಹಾಗೂ ಉದ್ಯೋಗ ಕೈತಪ್ಪಿ ಹೋದುದರಿಂದ ಉಂಟಾದ ನಷ್ಟ ಎಲ್ಲದಕ್ಕೂ ಸರ್ಕಾರಗಳು ನಷ್ಟವನ್ನು ಭರಿಸಬೇಕು.
- ಒಬ್ಬರ ಭೂಮಿಯನ್ನು ವಶಪಡಿಸಿಕೊಂಡರೆ ಅದೇ ಮೌಲ್ಯದ ಹಾಗೂ ಗುಣಮಟ್ಟದ ಅದೇ ಬೆಲೆ ಬಾಳುವ ಭೂಮಿಯನ್ನೇ ಪರಿಹಾರವಾಗಿ ನೀಡಬೇಕು. ಹಣದ ರೂಪದಲ್ಲಿ ನೀಡಲಾಗುವ ಪರಿಹಾರ ಭೂಮಿಯ ಮೌಲ್ಯ ಹಾಗೂ ಆಸ್ತಿಯ ಗುಣಮಟ್ಟದಲ್ಲಿ ವ್ಯತ್ಯಾಸ ಇರುವಂತಿಲ್ಲ.
- ಭೂಮಿಯ ಧಾಖಲೆಗಳು ಹೊಂದಿದ್ದರೂ ಹೊಂದಿಲ್ಲದಿದ್ದರೂ ಸಂತ್ರಸ್ತರು ಎಲ್ಲರಿಗೂ ಪರಿಹಾರ ನೀಡಲೇಬೇಕು.
- ಮಹಿಳೆಯರು ಪುರುಷರು ಎಂಬಂತೆ ಯಾವುದೇ ಲಿಂಗ ತಾರತಮ್ಯವಿಲ್ಲದೆ, ಸಮನಾಗಿ ಪರಿಹಾರ ನೀಡಬೇಕು.
- ಒಬ್ಬಂಟಿಯಾಗಿರುವವರು ಅದರಲ್ಲೂ ವೃದ್ದಾಪ್ಯರು, ಮಹಿಳೆಯರು ಹಾಗೂ ವಿಧವೆಯರು ಪರಿಹಾರಕ್ಕೆ ಅರ್ಹರಾಗಿರುತ್ತಾರೆ.





## ಬಲವಂತದಿಂದ ತೆರವುಗೊಂಡ ಸಂತ್ರಸ್ತರಿಗೆ ನ್ಯಾಯ ಕೇಳಲು ಮಾಡಬಹುದಾದ ತುರ್ತು ಕಾರ್ಯಗಳು :

- ತೆರವುಗೊಳಿಸುವ/ಒಕ್ಕಲೆಬ್ಬಿಸುವ ಸಂಧರ್ಭಗಳಲ್ಲಿ ಮೊದಲ ಆದ್ಯತೆಯ ಕೆಲಸವೆಂದರೆ ಮಾಹಿತಿ ಸಂಗ್ರಹಣೆಯೇ. ತಮ್ಮ ಮನೆಗಳನ್ನು, ವಸ್ತುಗಳನ್ನು ರಕ್ಷಿಸುವುದರ ಜೊತೆಗೆ ತಾವುಗಳು ಅಲ್ಲದೆ ತಮ್ಮ ನೆರೆಹೊರೆಯ ಯಾರನ್ನಾದರೂ ಸರ್ಕಾರದ ಅತಿಕ್ರಮಣಗಳನ್ನು/ ಅತೀರೇಕಗಳನ್ನು ಪೋಟೊ ತೆಗೆಯುವಂತೆ ಸೂಚಿಸುವುದು.
- ಕೂಡಲೇ ತುರ್ತು ಸಂಖ್ಯೆಗಳಿಗೆ, ಮಾದ್ಯಮಗಳಿಗೆ ಮಾಹಿತಿ ನೀಡುವುದು (ಕೆಲವು ದೂರವಾಣಿ ಸಂಖ್ಯೆಗಳನ್ನು ಈ ಕೈಪಿಡಿಯಲ್ಲಿ ನೀಡಲಾಗಿದೆ)
- ತಮ್ಮ ಪ್ರದೇಶಗಳಲ್ಲಿರುವ ಜನಸಂಘಟನೆಗಳನ್ನು ಒಟ್ಟಿಗೆ ಸೇರಿಸುವುದು. ಒಂದು ವೇಳೆ ಸ್ಥಳೀಯ ಸಂಘಟನೆಗಳಿಲ್ಲದ ಅಥವಾ ಒಟ್ಟಿಗೆ ಬರಲು ಒಪ್ಪಿಕೊಳ್ಳದ ಪಕ್ಷದಲ್ಲಿ ನಿಮ್ಮ ಊರ ಹಿರಿಯರು, ಗಂಡಸರು, ಮಹಿಳೆಯರು ಯುವಜನರು ಸೇರಿದಂತೆ ಒಂದು ತುರ್ತು ಕಾರ್ಯಕಾರಿ ಸಮಿತಿಯನ್ನು ರಚಿಸುವುದು.
- ಒಕ್ಕಲೆಬ್ಬಿಸುವುದು/ಸ್ಥಳಾಂತರದ ಕುರಿತ ಮಾಹಿತಿಗಳನ್ನು ಶೇಖರಿಸಿ ಅದರಿಂದ ನಡೆದ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಮಾಹಿತಿಗಳನ್ನು ಕಲೆಹಾಕುವುದು. ಈ ಹೊತ್ತಿಗೆಯಲ್ಲಿ ನೀಡಿರುವ ಮಾಹಿತಿಗಳನ್ನೂ ಸಹ ಅದರಲ್ಲಿ ಸೇರಿಸಿ ಒಂದು ವರದಿಯನ್ನು ತಯಾರು ಮಾಡುವುದು.
- ಜನಸಂಘಟನೆಗಳು ಅಥವಾ ಅಲ್ಲಿರುವ ತುರ್ತುಕಾರ್ಯ ಸಮಿತಿ ಜನರಿಗಾಗಿ ಕೆಲಸಮಾಡುವ ಸಮಾಜ ಸೇವಕರು ಮುಂತಾದವರನ್ನು ಸೇರಿಸಿ ಸತ್ಯ ಶೋಧನೆ"(ಫ್ಯಾಕ್ಟ್ ಫೈಂಡಿಂಗ್) ಸಮಿತಿಯನ್ನು ಮಾಡಿ ವರದಿಯನ್ನು ತಯಾರು ಮಾಡುವುದು
- ಮಾನವ ಹಕ್ಕುಗಳಿಗಾಗಿ ಕೆಲಸಮಾಡುವ ವಕೀಲರನ್ನು ಭೇಟಿಯಾಗಿ ನ್ಯಾಯಾಲಯದಲ್ಲಿ ದೂರು ದಾಖಲಿಸಬಹುದು (ರಿಟ್ ಪೆಟಿಷನ್) ಅಥವ ಸಾರ್ವಜನಿಕ ಹಿತಾಸಕ್ತಿ (ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್)ನ್ನು ದಾಖಲಿಸಬಹುದು.
- ಇನ್ನೂ ಅಗತ್ಯವಿರುವ ಹೆಚ್ಚಿನ ಮಾಹಿತಿಗಾಗಿ ಮಾಹಿತಿಹಕ್ಕು ಕಾಯ್ದೆ 2005ನ್ನು ಬಳಸಿಕೊಳ್ಳಬಹುದು
- ಈ ಅನ್ಯಾಯವನ್ನು ಖಂಡಿಸಿ ಸಂಬಂಧಪಟ್ಟ ಸರ್ಕಾರೀ ಇಲಾಖೆಗೆ ಆಕ್ಷೇಪಣಾ ದೂರನ್ನು ಕಳಿಸಬಹುದು ಜೊತೆಗೆ ತಮ್ಮ ಪರಿಸ್ಥಿತಿಯನ್ನು ಮುಖ್ಯಮಂತ್ರಿ ಹಾಗೂ ರಾಜ್ಯಪಾಲರ ಗಮನಕ್ಕೂ ತರಬಹುದು.
- ತಮ್ಮ ಮೇಲೆ ನಡೆದ ಮಾನವ ಹಕ್ಕು ಉಲ್ಲಂಘನೆಗೆ ಸಂಬಂಧ ಪಟ್ಟ ಮೇಲೆ ತಿಳಿಸಿರುವ ಮಾಹಿತಿಗಳೊಂದಿಗೆ ಮಾನವ ಹಕ್ಕು ಆಯೋಗ, ರಾಷ್ಟ್ರಮಟ್ಟದ ಸಂಸ್ಥೆಗಳು ಸಂಘಟನೆಗಳು ಹಾಗೂ ವಿಶ್ವಸಂಸ್ಥೆಯ ವಿಶೇಷ ಅಧಿಕಾರಿಗಳು ಮುಂತಾದವರಿಗೆ ಕುರಿತು ದೂರು ಸಲ್ಲಿಸಬಹುದು. ಹಾಗೂ ಬರೆಯಬಹುದು.
- ಸಹಿ ಆಂದೋಲನ (ಸಿಗ್ನೇಚರ್ ಕಾಂಪೇನ್) ಹೋರಾಟ, ಪ್ರತಿಭಟನೆ ಮುಂತಾದ ಗಮನ ಸೆಳೆಯುವ ಚಟುವಟಿಕೆಗಳಲ್ಲಿ ತೊಡಗಬಹುದು.



ಬಲವಂತದ ಮನೆ ತೆರವನ್ನು ವಿರೋಧಿಸಿ
ಮಹಿಳೆಯರ ಉಪವಾಸ ಧರಣಿ



## ಬಲವಂತದ ಒಕ್ಕಲೆಬ್ಬಿಸುವಿಕೆಯನ್ನು ಎದುರಿಸಲು ಉಪಯೋಗಿಸಬೇಕಾದ ಕೆಲವು ತಂತ್ರಗಳು

- ಬಲವಂತದ ಒಕ್ಕಲೆಬ್ಬಿಸುವಿಕೆಯನ್ನು ಎದುರಿಸುವ ಮುನ್ನ ಮಾಡಬೇಕಿರುವ ಮೊದಲ ಕೆಲಸ ತಮ್ಮ ಹಕ್ಕುಗಳನ್ನು ತಿಳಿದುಕೊಳ್ಳುವುದೇ ಆಗಿರುತ್ತದೆ. ಹಕ್ಕುಗಳನ್ನು ತಿಳಿದುಕೊಂಡರೆ ಮಾತ್ರ ಹಕ್ಕುಗಳ ಉಲ್ಲಂಘನೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಪುಸ್ತಕವನ್ನು ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಓದಿ ಹೇಳುವ ಮೂಲಕ ಜಾಗೃತಿ ಮೂಡಿಸಬಹುದು.

- ತಮ್ಮ ವಾಸಸ್ಥಳದ ಊರ ಹಿರಿಯರು, ಸಂಘಟನೆಗಳು ಮಹಿಳಾ ಸಂಘ, ಹಾಗೂ ಯುವಜನಸಂಘ ಮಕ್ಕಳು ಈ ಪುಸ್ತಕವನ್ನು ಓದಿ ಇದರಲ್ಲಿ ಕೊಡಲಾಗಿರುವ ಮಾಹಿತಿಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. ತಮ್ಮೊಂದಿಗೆ ಕೆಲಸ ಮಾಡುವ ಸ್ವಯಂ ಸೇವಾ ಸಂಘ ಸಂಸ್ಥೆಗಳಲ್ಲಿ ಈ ಪುಸ್ತಕದ ಕುರಿತು ತರಬೇತಿ ನೀಡುವಂತೆ ಕೇಳಿಕೊಳ್ಳಬಹುದು.

- ಸ್ಥಳಾಂತರ ಅಥವಾ ಧ್ವಂಸವನ್ನು ಸಮೀಪದಿಂದ ಗಮನಿಸುವಂಥ ತಂಡವೊಂದನ್ನು ರೂಪಿಸಬೇಕು. (ಇದರಲ್ಲಿ ಮಹಿಳೆಯರು ಹೆಚ್ಚಾಗಿ ಪ್ರತಿನಿಧಿಸಬೇಕು)


- ಮಾಹಿತಿ ಹಕ್ಕು 2005 ನ್ನು ಉಪಯೋಗಿಸಲು ಕಲಿತುಕೊಳ್ಳುವುದು.

- ಜನರ ಹಕ್ಕುಗಳಿಗಾಗಿ ಕೆಲಸ ಮಾಡುತ್ತಿರುವ ಸಂಘ ಸಂಸ್ಥೆಗಳನ್ನು ಗುರುತಿಸಿ ಒಕ್ಕಲೆಬ್ಬಿಸುವಿಕೆಯನ್ನು ತಡೆಯುವಂಥ ವಿಚಾರಗಳ ಕುರಿತು ಚರ್ಚಿಸುವುದು

- ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ತಯಾರಾಗಿದ್ದರೆ ವಕೀಲರೊಬ್ಬರ ಸಲಹೆಯ ಮೇರೆಗೆ ಅಗತ್ಯ ಮಾಹಿತಿಯನ್ನು ಸಂಗ್ರಹಿಸುವುದು/ಕಲೆಹಾಕುವುದು

- ಹತ್ತಿರದಲ್ಲಿರುವ ಕೊಳಗೇರಿ ಪ್ರದೇಶದ ಜನರು ಹಾಗೂ ಇತರೆ ಜನರ ಸಹಾಯ ಹಾಗೂ ಬೆಂಬಲವನ್ನು ಪಡೆಯುವುದು

- ನಗರ ಬಡವರೊಂದಿಗೆ ಕೆಲಸ ಮಾಡುವ ಅಥವಾ ನಗರ ಬಡವರ ಸಂಘಟನೆಗಳ ನೆರವುಪಡೆಯುವುದು.




ಹಲೋ
ಸುದ್ದಿ ಪತ್ರಿಕೆ
ಸಂಪಾದಕರಾ ?

**ಬಲವಂತದ ಒಕ್ಕಲೆಬ್ಬಿಸುವಿಕೆಯ ಸಂಧರ್ಭಗಳಲ್ಲಿ ಸಂಪರ್ಕಿಸಬಹುದಾದ ದೂರವಾಣಿಗಳು ಹಾಗು ವಿಳಾಸಗಳು**

**ಸಂಪರ್ಕಿಸಬಹುದಾದ ಸರ್ಕಾರದ ಪ್ರತಿನಿಧಿಗಳು,**

1) ಮಾನ್ಯ, ಮುಖ್ಯಮಂತ್ರಿಗಳ ಕಛೇರಿ,
ವಿಳಾಸ, 323, 3ನೆ ಮಹಡಿ, ವಿಧಾನಸೌಧ, ಬೆಂಗಳೂರು 560001
ಕಛೇರಿಯ ದೂರವಾಣಿ +91-080-22253414,22253424 ಫ್ಯಾಕ್ಸ್ 080-22253115

2) ಮಾನ್ಯ, ರಾಜ್ಯಪಾಲರು,
ರಾಜ್ ಭವನ
ರಾಜ ಭವನ ರಸ್ತೆ, ಬೆಂಗಳೂರು-560001
ಫೋನ್ 080-22254102, 22253555, ಫ್ಯಾಕ್ಸ್: 080-22258150


3) ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿಗಳು,
ಸರ್ಕಾರಿ ಕಾರ್ಯಲಯ. ಸಚಿವಾಲಯ-2
213, 2ನೆ ಮಹಡಿ, ವಿಕಾಸಸೌಧ, ಬೆಂಗಳೂರು-560001
ಫೋನ್ 080-22256356/22034504
ಫ್ಯಾಕ್ಸ್: 080-22253718

4) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರು,
ದೂ: 080-22237455, 080-22221286, 080-22975550 ಈಚಿಥ 22223194.
ಮೇಯರ್ ಕಛೇರಿ, 080 22975501
ಎನ್ ಆರ್ ವೃತ್ತ ಬೆಂಗಳೂರು-560002

5) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ನಂ 55, ರಿಸಲ್ದಾರ್ ರಸ್ತೆ, ವಿ ವಿ ಗಿರಿ ಕಾಲೋನಿ, ಶೇಷಾದ್ರಿಪುರಂ, ಬೆಂಗಳೂರು
ಫೋನ್; 080-23568378

1) ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
4ನೆ ಮಹಡಿ, 5ನೆ ಫೇಸ್, ಎಂಎಸ್ ಬಿಲ್ಡಿಂಗ್,
ಅಂಬೇಡ್ಕರ್ ಬೀದಿ, ಬೆಂಗಳೂರು- 560001,
ದೂರವಾಣಿ- 080-22392200, ಫ್ಯಾಕ್ಸ್ 080-22392209.
ಉಚಿತ ಸಹಾಯವಾಣಿ: 1800-4252-3333

2) ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ,
4ನ ಮಹಡಿ, ಕೃಷಿ ಭವನ, ರಾಣಿ ಚೆನ್ನಮ್ಮ ವೃತ್ತ
ನೃಪತುಂಗ ರಸ್ತೆ, ಬೆಂಗಳೂರು, 560001.
ದೂರವಾಣಿ: 080-22115291, ಫ್ಯಾಕ್ಸ್: 080-22115292 ಇಮೈಲ್: kscpcr@gmail.com



3) ಕರ್ನಾಟಕ ರಾಜ್ಯ ಮಹಿಳಾ ಆಯೋಗ,
ಕೆ ಹೆಚ್ ಬಿ ಬಿಲ್ಡಿಂಗ್, ಮೊದಲನೆ ಮಹಡಿ, ಕೆ ಜಿ ರೋಡ್, ಬೆಂಗಳೂರು-560009
ಫೋನ್: 080-22216485/22216486

1) ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ,
ಫಾರಿದ್‌ಕೋಟ್ ಹೌಸ್, ಕೂಪರ್ನಿಗಸ್ ಮಾರ್ಗ್, ನವದೆಹಲಿ, 110001,
ಪೋನ್ 011-23382509/09810298900 ಈಮೆಲ್: jrlawnhrc@nic.in

1) ರಾಷ್ಟ್ರೀಯ ಮಹಿಳಾ ಆಯೋಗ
4 ದೀನದಯಾಳ್ ಉಪಾದ್ಯಾಯ ಮಾರ್ಗ್,
ನವದೆಹಲಿ-110001, ಪೋನ್ 011-23237166 ಈಮೈಲ್: ncw@nic.in

2) ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ
5ನೆ ಮಹಡಿ, ಚಂದರ್ಲೋಕ್ ಬಿಲ್ಡಿಂಗ್, 36, ಜನ್‌ಪತ್, ನವದೆಹಲಿ-110001
ಫೋನ್; 011-23478200, ಈಮೆಲ್ ncprc.india@gmail.com

ರಾಷ್ಟ್ರೀಯ ಮಾನವ ಹಕ್ಕು ಸಂಸ್ಥೆಗಳು


1. ಹೌಸಿಂಗ್ ಅಂಡ್ ಲ್ಯಾಂಡ್ ರೈಟ್ಸ್ ನೆಟ್ವರ್ಕ್, ಜಿ-18/1, ನಿಜಾಮುದ್ದಿನ್ ವೆಸ್ಟ್
ನವದೆಹಲಿ-1100013, ಪೋನ್: 011-45705000 ಈಮೈಲ್: contact@hlrn.org.in

ಕರ್ನಾಟಕದ ಮಾನವ ಹಕ್ಕು ಸಂಸ್ಥೆಗಳು;

ಜನಸಹಯೋಗ, ಮಾನವ ಹಕ್ಕು ಶಿಕ್ಷಣ ಹಾಗೂ ನಗರ ಸ್ಲಂ ಸಂಪನ್ಮೂಲ ಕೇಂದ್ರ
ನಂ, 2/1, ತ್ರಿಕೂಟ 8-ಎ ಮುಖ್ಯ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-560027
ಪೊನ್ 080-22128565 ಈಮೈಲ್: janasahyog@gmailcom

ಪರ್ಯಾಯ ಕಾನೂನು ವೇದಿಕೆ,
ನಂ 122/4, ಇನ್ಫೆಂಟರಿ ರಸ್ತೆ, ಬಾಲಾಜಿ ಆರ್ಟ್ ಗ್ಯಾಲರಿ ಹತ್ತಿರ, ಬೆಂಗಳೂರು-560001
ಪೊನ್ 080-22868787, ಈಮೈಲ್: contact@altlawforum.org

ಸೌತ್ ಇಂಡಿಯನ್ ಸೆಲ್ ಪಾರ್ ಹ್ಯೂಮನ್ ರೈಟ್ಸ್ ಎಜುಕೇಷನ್ ಅಂಡ್ ಮಾನಿಟರಿಂಗ್ (SICHREM)
ನಂ 35, ಮೊದಲನೆ ಮಹಡಿ, ಅಂಜಾನಪ್ಪ ಕಾಂಪ್ಲೆಕ್ಸ್, ಹೆಣ್ಣೂರು ಮುಖ್ಯ ರಸ್ತೆ, ಲಿಂಗರಾಜಪುರಮ್,
ಬೆಂಗಳೂರು-560084, ಪೊನ್: 080-25473922/ 25804072-73, ಈಮೈಲ್: msichrem@gmail.com



**ಕನ್ನಡ ದಿನಪತ್ರಿಕೆಗಳು :**

ಪ್ರಜಾವಾಣಿ, ಪೋನ್, 080-25880607 ಪ್ಯಾಕ್ಸ್; 080-25880618

ಕನ್ನಡ ಪ್ರಭ; ಫೋನ್: 080-30556300, ಪ್ಯಾಕ್ಸ್ 080-33101354/ 30556323

ವಿಜಯ ಕರ್ನಾಟಕ, ಫೋನ್, 080-40877666, ಪ್ಯಾಕ್ಸ; 080-40877695

ಸಂಜೆ ವಾಣಿ, ಫೋನ್; 080-22868882/ 22866213, ಪ್ಯಾಕ್ಸ್; 080-22868484

ಈ ಸಂಜೆ; ಫೋನ್, 080-23126297/291/141, ಪ್ಯಾಕ್ಸ್, 080-23124073

ವಿಜಯ ವಾಣಿ, ಫೋನ್ 080-26257400, ಪ್ಯಾಕ್ಸ್, 080-26257464

ವಾರ್ತಾಭಾರತಿ, ಫೋನ್, 080-22102676, ಪ್ಯಾಕ್ಸ್, 080-22102677

ಉದಯ ವಾಣಿ, ಫೋನ್, 080-25587351/ 25587467, ಪ್ಯಾಕ್ಸ್; 080-25586898

ಸಂಯುಕ್ತ ಕರ್ನಾಟಕ, ಫೋನ್;080-22214392, ಪ್ಯಾಕ್ಸ್;080-22214366

**ಆಂಗ್ಲ ದಿನಪತ್ರಿಕೆಗಳು :**

ಡೆಕ್ಕನ್ ಹೆರಾಲ್ಡ್; ಫೋನ್, 080-25880000, ಪ್ಯಾಕ್ಸ್, 08025880523

ದಿ ಇಂಡಿಯನ್ ಎಕ್ಸ್ ಪ್ರೆಸ್; ಫೋನ್, 080- 22866893, ಪ್ಯಾಕ್ಸ್, 080-22865222/22866617

ದಿ ಹಿಂದೂ; ಫೋನ್, 080-30854000, ಪ್ಯಾಕ್ಸ್, 080-22865042

ದಿ ಟೈಮ್ಸ್ ಆಪ್ ಇಂಡಿಯಾ; ಫೋನ್, 080-42200000, ಪ್ಯಾಕ್ಸ್, 080-42200202

ಬೆಂಗಳೂರ್ ಮಿರರ್; ಫೋನ್, 080-40876777, ಫ್ಯಾಕ್ಸ್, 080-42200151

## ಟಿ ವಿ ಮಾಧ್ಯಮಗಳು

ಉದಯ ಟಿವಿ ಮತ್ತು ಉದಯ ವಾರ್ತೆ; ಫೋನ್, 080-44676650, ಪ್ಯಾಕ್ಸ್, 080-44676767

ಈ ಟಿವಿ; ಫೋನ್, 080-22481991/22481998

ಟಿವಿ 9 ಕನ್ನಡ; ಫೋನ್, 080-40312702, ಪ್ಯಾಕ್ಸ್, 080-40312740


ಸಮಯ ಟಿವಿ; ಫೋನ್, 080-43308333/22115436, ಪ್ಯಾಕ್ಸ್, 080-22115438

ಸುವರ್ಣ ಟಿವಿ; 24ಠ7; ಫೋನ್, 080-30556422, ಪ್ಯಾಕ್ಸ್, 080-30556333

ಕಸ್ತೂರಿ ನ್ಯೂಸ್; ಫೋನ್, 080-40443281, ಪ್ಯಾಕ್ಸ್, 080-40443295

ಪಬ್ಲಿಕ್ ಟಿವಿ; ಪೋನ್, 080-23574041

ಬಿ ಟಿವಿ; ಪೋನ್, 080-49686666, ಪ್ಯಾಕ್ಸ್, 080-49686677



# ¥ÀPÀ I PÀgÀ ¥ÀjZÀAiÀÄ

## ºË¹AUï CAqï ¯ÁAqï gÉÊmï £ÉI PÀïð. £ÀªÀzÉºÀ°.

ªÀiÁ£ÀªÀºÀPÀÌÄUÀ¼À DzÁgÀzÀ° UÀÄtªÀÄI zÀ ªÀ¸Àw ºÁUÀÆ ¨sÀÆ«Äº ÀPÀÌ£ÀÄ M¦PÉÆAqÀÄ CzÀ£ÀÄ eÁjUÉ vÀgÀ®Ä, GvÀÛ f¸À®Ä ºÁUÀÆ gÀQ¸ÀĪÀÅzÀÄ ªÀÄQ ºÁUÀÆ ¸ÀªÀÄÄzÁAiÀÄUÀ¼À ±ÁAw¬ÄAzÀ®Æ, ¸Á©ªÀiÁ£ÀåAzÀ®Æ §zÀÄPÀĪÀÅzÀPÉÌ ¥ÀÆgÀPÀªÁV ºÉZÏ Dgï J¯ï J£ï PÁAiÀÄð ¤ªÀð»¸ÀÄvÀzÉ. vÀ£À PÁAiÀÄðzÀ° zÀªÀÄ¤vÀ ¸ÀªÀÄÄzÁAiÀÄUÀ¼À ºÀPÀÌÄUÀ¼À£ÀÄ GvÀÛ f¸ÀĪÀÅzÀÄ ºÁUÀÆ gÀQ¸ÀĪÀÅzÀgÉÆAzÀ¢UÉ ªÀÄ»¼ÉAiÀÄgÀ ªÀ¸Àw, ¨sÀÆ«ÄºÀPÀÌ ºÁUÀÆ ¦vÁf ðvÀ D¹AiÀÄ ¸ÀªÀiÁ£À ºÀAaPÉUÁVAiÀÄÆ PÁAiÀÄð ¤ªÀð»¸ÀÄvÀzÉ.EªÀÅUÀ¼À£ÀÄ ªÀPÁ®vÀÄ,CzÀÄAiÀÄ£À,ªÀiÁ£Àª ºÀPÀÌÄUÀ¼À ²PÀëtºÁUÀÆ ¸ÀA¥ÀPÀð eÁ®UÀ¼À£ÀÄ ¸À½ÃAiÀÄ,gÁ¶ÖçÃAiÀÄ ºÁUÀÄ CAvÀgÁgÁ¶ÖçÃAiÀÄ ªÀÄIzÀ° ¤«Äð¸ÀĪÀÅzÀPÉÌ ±À«Ä¸ÀÄwzÉ.

## ¸ÀA dUÀvÀÄ,

PÀ£ÁðI PÀzÀ PÉÆ¼ÀUÉÃj ¤ªÁ¹ AiÀÄĪÀPÀ AiÀÄĪÀwAiÀÄjAzÀ E¸À« 2000gÀzÀ° ¥ÁgÀA©¸À¯ÁzÀ ªÀiÁzÀåªÀÄ UÀÄA¥ÀÄ zÀ¤¬Ä®zÀ PÉÆ¼ÀUÉÃj ¤ªÁ¹UÀ½UÉ ªÀÄvÀÄ CzÀgÁZÉUÉ CªÀgÀzÉÃ DzÀ zÀ¤AiÀiÁVzÉ. ªÉÆzÀ°UÉ ¸ÀAdUÀvÀÄ ¥ÀwPÉ £ÀAvÀgÀ «rAiÉÆÃ qÁPÀÆå«ÄAIjUÀ¼À, PÉÆ¼ÀUÉÃjUÀ¼À AiÀÄĪÀ d£ÀjUÉ ªÀiÁzsÀåªÀÄ vÀgÀ¨ÉÃw ²©gÀUÀ¼À ªÀÄÄAvÁzÀªÀÅUÀ¼À£À ªÀiÁqÀÄvÀ gÁdQzÀ°£À PÀ¼ÉzÀ 15 ªÀµÀðUÀ¼À £ÀUÀgÀ ªÀAavÀ ¸ÀªÀÄÄzÁAiÀÄUÀ¼À ºÉÆÃgÁI UÀ¼À ¸ÀA¨sÀªÀÅUÀ¼À eÉÆvÉ¬ÄgÀĪÀÅzÀgÉÆAzÀ¢UÉ ¸ÁQAiÀiÁVAiÀÄÆ ªÀÄÄAzÀĪÀgÉAiÀÄÄwzÉ.

**ಪ್ರಕಟಣೆ:**

**Published by**

Housing and Land Rights Network


**ಹೌಸಿಂಗ್ ಅಂಡ್ ಲಾಂಡ್ ರೈಟ್ ನೆಟ್ವರ್ಕ್,**

**ಜಿ-18/1, ನಿಜಾಮುದ್ದಿನ್‌ವೆಸ್ಟ್, ನವದೆಹಲಿ-110013 ಫೋನ್/ಫ್ಯಾಕ್ಸ್ 011-25358492**

Housing and Land Rights Network(HLRN)
G-18/1,Nizamuddin West,New Dehli-110013
Phone-011-4054-1680/ E-mail: contact@hlrn.org.in, web : www.hlrn.org.in ?


ಸ್ಲಂ ಜಗತ್ತು
ಜನಶೆಯ ಸಂಘರ್ಷದಾಣಿ


**ಸ್ಲಂ ಜಗತ್ತು**

**771, 23ನೆ ಅಡ್ಡ ರಸ್ತೆ, 2ನೆ ಮುಖ್ಯ ರಸ್ತೆ, ಲಕ್ಷ್ಮಣರಾವ್ ನಗರ, ಬೆಂಗಳೂರು-560047**

Slum Jagtthu
No.771,23rd cross,2nd main, LR Nagar,Bangalore-560047.
E-mail:slumjagatthu@gmail.com